ಮತ್ತು ಇತರೆ ಕೆಲವು ವಿಚಾರಗಳನ್ನು ಹೇಳಿದರು. ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲೀ, ಈ ವಿಷಯದಲ್ಲಿ ಒಂದು ನೀತಿ ನಿರೂಪಣೆಯಾಗಲಿ.

ಶ್ರೀ ವಾಟಾಳ್ ನಾಗರಾಜ್:– ಅದರಲ್ಲಿ ಭಾಗ್ಯಜ್ಯೋತಿ ವಿಷಯವನ್ನೂ ತಾವು ಸೇರಿಸಬೇಕು.

ಅಧ್ಯಕ್ಷರು:– ಆಯಿತು. ತಾವು ಮಾತನಾಡುವಾಗ ಅದರ ಬಗ್ಗೆಯೂ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಇವತ್ತು ಈ 106 ಜನ ರೈತರು ಏನು ಸಾಮೂಹಿಕ ಏತ ನೀರಾವರಿ ಮಾಡಿಕೊಂಡಿದ್ದಾರೆ ಅವರು ಪ್ರತ್ಯೇಕವಾಗಿ ಅರ್ಜಿ ಕೊಟ್ಟು ವಿದ್ಯುತ್ ತೆಗೆದುಕೊಂಡಿದ್ದರೆ, ಅವರಿಗೆ ನೀವು 540 ರೂಪಾಯಿಗಳನ್ನು ನಿಗದಿ ಮಾಡುತ್ತಿದ್ದಿರೋ ಇಲ್ಲವೋ.

ಅಧ್ಯಕ್ಷರು:– ಅರ್ಧ ಗಂಟೆ ಚರ್ಚೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನಲ್ಲಾ ಮತ್ತೆ ಏಕೆ ಮಾತನಾಡುತ್ತಿದ್ದೀರಿ?

ಶ್ರೀ ಗೋವಿಂದ ಎಂ. ಕಾರಜೋಳ:– ಭಾಗ್ಯಜ್ಯೋತಿ ಮತ್ತಿತರ ವಿಷಯಗಳಿಗೆ ಹೋಗಿ ನನಗೆ ಉತ್ತರ ಸಿಕ್ಕಿಲ್ಲ. ಇವತ್ತು ಸರ್ಕಾರಕ್ಕೆ ಅಧಿಕಾರ ಇದೆ. ಇದೇನೂ ಅಷ್ಟು ದೊಡ್ಡ ಹೊರೆ ಆಗುವುದಿಲ್ಲ. ಉತ್ತರ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಇವೆ. ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಈ ಏತ ನೀರಾವರಿ ಯೋಜನೆಗಳು ಇವೆ. ಇವುಗಳನ್ನು ರೈತರು ಮಾಡಿಕೊಂಡಂಥಾದ್ದು, ಇವುಗಳಿಗೆ ಈ ಏತ ನೀರಾವರಿ ಯೋಜನೆಗಳು ಇವೆ. ಇವುಗಳನ್ನು ರೈತರು ಮಾಡಿಕೊಂಡಂಥಾದ್ದು, ಇವುಗಳಿಗೆ 540 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿಬಿಡಲಿ. ಇವತ್ತು ಸರ್ಕಾರದವರು ಬೇಕಾದಷ್ಟು ಸಬ್ಸಿಡಿ ಕೊಡುತ್ತಿದ್ದಾರೆ.

ಅಧ್ಯಕ್ಷರು:– ನೀವು ಎಲ್ಲಾ ಪ್ರಶ್ನೆ ಕೇಳಿ ಆಯಿತು. ನಾನು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಹಾಗಾದರೂ ಮಾತನಾಡುತ್ತಿದ್ದೀರಲ್ಲಾ.

ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ವನ್ಯ ವಿಭಾಗದವರು ರೈತರ ಜಮೀನು ಖರೀದಿಸುವ ಬಗ್ಗೆ

11(559) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ, ಹೊಸನಗರ ಹಾಗೂ ಶಿವಮೊಗ್ಗ ತಾಲ್ಲೂಕುಗಳಲ್ಲಿ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದಿಂದ ಅರಣ್ಯದೊಳಗಿರುವ ರೈತರ ಜಮೀನುಗಳನ್ನು ಖರೀದಿಸಿ (Buy back) ರೈತರನ್ನು ಅರಣ್ಯ ಪ್ರದೇಶದಿಂದ ಹೊರಗೆ ಕಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ವಲಯ ಅರಣ್ಯಾಧಿಕಾರಿಗಳ (ವನ್ಯಜೀವಿ ವಿಭಾಗ) ಕಛೇರಿಯಿಂದ ತೀರ್ಥಹಳ್ಳಿ ಹೊಸನಗರ ಹಾಗೂ ಶಿವಮೊಗ್ಗ ಸಬ್ ರಿಜಿಸ್ಟ್ರಾರ್ ಕಛೇರಿಗೆ ಪತ್ರ ಬರೆದು ಸದರಿ ಪ್ರದೇಶದ ಜಮೀನಿನ ಬೆಲೆಯ ಬಗ್ಗೆ ಮಾಹಿತಿ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರ್ಕಾರ ಅರಣ್ಯ ಜಮೀನಿನ ಬೆಲೆಯ ನಿರ್ಧಾರ ಕೈಗೊಳ್ಳಲಾಗಿದೆಯೇ;

ಈ) ಹಾಗಿದ್ದಲ್ಲಿ ಈ ನಿರ್ಧಾರವನ್ನು ಯಾವಾಗ ಕೈಗೊಳ್ಳಲಾಗಿದೆ;

ಉ) ಈ ರೀತಿ ಸರ್ಕಾರ ತೀರ್ಮಾನಿಸಿದ್ದರೆ ಇದಕ್ಕಾಗಿ ಈ ಸಾಲಿನಲ್ಲಿ ಮೀಸಲಿಟ್ಟಿರುವ ಹಣ ಎಷ್ಟು; ರೈತರು ಜಮೀನನ್ನು ವಾಪಸ್ಸು ಪಡೆಯುವ ಕಾರ್ಯ ಯಾವಾಗ ಪ್ರಾರಂಭಿಸಲಾಗುವುದು;

ಊ) ಮೇಲ್ಕಂಡ ಪ್ರಸ್ತಾವನೆ ಸರ್ಕಾರದ ಮುಂದಿಲ್ಲದಿದ್ದರೆ ಈ ರೀತಿ ಪತ್ರ ಬರೆದು ಅದರ ಪರಿಣಾಮವಾಗಿ ಈ ಭಾಗದ ರೈತರಲ್ಲಿ ವಿನಾಕಾರಣಗೊಂದಲ ನಿರ್ಮಾಣ ಮಾಡಿರುವ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಗುರುಪಾದಪ್ಪ ನಾಗಮಾರ ಪಲ್ಲಿ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) ಶೆಟ್ಟಿಹಳ್ಳಿ ಶರಾವತಿ ಅಭಯಾರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಖಾಸಗಿ ಜಮೀನನ್ನು ಅವರ ಸ್ವ ಇಚ್ಛೆಯಿಂದ ಸರ್ಕಾರಕ್ಕೆ ನೀಡಲು ಬಯಸಿದಲ್ಲಿ ಅದನ್ನು ಖರೀಸಿಸುವ ವಿಷಯ ಇಲಾಖಾ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ಆ) ಹೌದು

ಇ) ಅರಣ್ಯ ಇಲಾಖೆಗೆ ಸೇರಿದ ಜಮೀನು ಸರ್ಕಾರಕ್ಕೆ ಸೇರಿದ ಜಮೀನಾಗಿರುತ್ತದೆ. ಅದುದರಿಂದ ಅರಣ್ಯ ಜಮೀನಿನ ಬಗ್ಗೆ ಬೆಲೆಯನ್ನು ನಿರ್ಧರಿಸುವುದು ಅಥವಾ ಅದನ್ನು ಖರೀದಿಗೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಈ ಪ್ರಸ್ತಾವನೆಯು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯ ಜೀವಿ), ಬೆಂಗಳೂರು ಇವರ ಹಂತದಲ್ಲಿ ಪರಿಶೀಲನೆಯಲ್ಲಿದೆ. ಈ ಪ್ರಸ್ತಾವನೆಗೆ ಅಂತಿಮ ರೂಪ ನೀಡಿದ ನಂತರ ಅದನ್ನು ಸರ್ಕಾರವು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು.

ಊ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಿಗೆ ಈ ಬೈ ಬ್ಯಾಕ್ ಪಾಲಿಸಿ ವಿಚಾರವಾಗಿ ಶೆಟ್ಟಿಹಳ್ಳಿ ಶರಾವತಿ ಅಭಯಾರಣ್ಯ ಪ್ರದೇಶದಲ್ಲಿ ಬರುವಂಥ ಹಳ್ಳಿ ರೈತರ ಖಾಸಗಿ ಜಮೀನುಗಳನ್ನು, ಅರಣ್ಯ ಇಲಾಖೆ ವತಿಯಿಂದ ಕೊಯ್ದುಕೊಂಡು ಅವರನ್ನು ಒಕ್ಕಲೆಬ್ಬಿಸುವುದಕ್ಕೆ ಒಂದು ಪಾಲಿಸಿಯನ್ನು ತರುವುದರ ಹಿನ್ನೆಲೆಯಲ್ಲಿ ನಾನು ಪ್ರಶ್ನೆ ಕೇಳಿದ್ದೇನೆ. ಈಗಾಗಲೇ, ಇದಕ್ಕೆ ಎಷ್ಟು ಹಣವನ್ನು ನಿಗದಿ ಮಾಡಿದ್ದೀರಿ, ಏನು ಬೆಲೆ ನಿಗದಿ ಮಾಡಿದ್ದೀರಿ ಎಂಬ ವಿವರಗಳನ್ನು ವಿವರವಾಗಿ ದಯವಿಟ್ಟು ಹೇಳಿ. ಏಕೆಂದರೆ, ಶಿವಮೊಗ್ಗ, ತೀರ್ಥಹಳ್ಳಿ, ಹೊಸನಗರ ಈ ಮೂರು ತಾಲ್ಲೂಕುಗಳ ವ್ಯಪ್ತಿಯ ಸುಮಾರು 60 ಹಳ್ಳಿಗಳು ಇದರ ವ್ಯಾಪ್ತಿಗೆ ಬರುತ್ತದೆ. ಈ 60 ಹಳ್ಳಿಗಳ ಜನರನ್ನು ನೀವು ಒಕ್ಕಲೆಬ್ಬಿಸಿ, ಅಲ್ಲಿ ಅರಣ್ಯ ಬೆಳೆಸಿ ಏನು ಮಾಡುವುದಕ್ಕೆ ಹೊರಟಿದ್ದೀರಿ ಎನ್ನುವುದನ್ನು ದಯವಿಟ್ಟು ಹೇಳಬೇಕು. ಅರಣ್ಯ ಬೆಳೆಸುವುದು ಎಂದರೆ, ಮಲೆನಾಡಿನ ರೈತರಿಗೆ ಮತ್ತು ಅಲ್ಲಿನ ಮುಗ್ದ ಜನರಿಗೆ ಕೊಡುವುದಿಲ್ಲ. ಈಗಾಗಲೇ ನಿಮ್ಮ ಪಾಲಿಸಿ ಬಗ್ಗೆ.....

ಅಧ್ಯಕ್ಷರು:- ಆಯಿತು, ಸಪ್ಲಿಮೆಂಟರಿ ಪ್ರಶ್ನೆ ಕೇಳಿ. ನೀವು ಭಾಷಣ ಮಾಡುತ್ತಿದ್ದೀರೋ ಪ್ರಶ್ನೆ ಕೇಳುತ್ತಿದ್ದೀರೋ....

ಶ್ರೀ ಅರಗ ಜ್ಞಾನೇಂದ್ರ:- ಇಲ್ಲ. ಇದು ಬಹಳ ಗಹನವಾದಂಥ ವಿಚಾರ. ಈ 60 ಹಳ್ಳಿಯಲ್ಲಿ ಆಗಿರುವ ವಿಚಾರವನ್ನು ಸ್ವಲ್ಪ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ, ನೀವು ಕಾಡು

ಇಲ್ಲದೇ ಇರುವ ಕಡೆಯಿಂದ ಬಂದಿದ್ದೀರಿ. ನಾವು ಕಾಡಿನಲ್ಲಿ ಹುಟ್ಟಿ ಬಂದಿದ್ದೇ ಶಾಪ ಆಗಿದೆ. ಆ 60 ಹಳ್ಳಿ ಎಂದರೆ, ಶರಾವರಿ ಮುಳುಗಡೆ ಪ್ರದೇಶದಿಂದ ಬಂದು, ಅಲ್ಲಿ ಕೆಲವರು ನೆಲೆಸಿದ್ದಾರೆ. ಅವರನ್ನು ಈಗ ಒಕ್ಕಲೆಬ್ಬಿಸುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಈ ಹಳ್ಳಿಗಳ ವ್ಯಾಪ್ತಿಯನ್ನು ಡೀ–ನೋಟಿಫೈ ಮಾಡುವುದಕ್ಕೆ, ಸರ್ಕಾರದಲ್ಲಿ ನಿರ್ಣಯ ಮಾಡಿ, ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ನಮಗೇನಾದರೂ ಸಹಾಯ ಮಾಡುವಂಥ ಯೋಜನೆ ನಿಮ್ಮ ಹತ್ತಿರ ಇದೆಯಾ? ಏಕೆಂದರೆ, ಶರಾವತಿಯಲ್ಲಿ ಕೆಲವು ಮುಳುಗಡೆಯಾಗಿ ಒಂದಿಷ್ಟು ಕಳೆದುಕೊಂಡಿದ್ದೇವೆ. ಕುವೆಂಪು ಅಭಯಾರಣ್ಯ, ಜೈವಿಕ ಅರಣ್ಯವೆಂದು ಘೋಷಣೆ ಮಾಡಿ, ಅಲ್ಲಿ ಒಂದಷ್ಟು ಜನರಿಗೆ ಕಿರುಕುಳ ಆಗಿದೆ. ಹೀಗಾಗಿ ಅರಣ್ಯದ ಮಧ್ಯ ಇರುವಂಥ ಪರಂಪರಾಗತವಾಗಿರುವಂಥ ಹಳ್ಳಿಗಳನ್ನು ನೀವು ಎಲ್ಲಿಗೆ ಸ್ಥಳಾಂತರ ಮಾಡುತ್ತೀರಿ ಹೇಳಿ. ಅಲ್ಲಿ ನಕ್ಸಲೈಟ್ಸ್‌ಗಳು ಇದನ್ನು ದುರುಪಯೋಗ ಮಾಡಿಕೊಂಡು, ಈಗಾಗಲೇ ಹೋರಾಟಗಳು ಪ್ರಾರಂಭವಾಗಿವೆ. ಜಮೀನು ಅಭಿವೃದ್ಧಿ ಮಾಡುವುದನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಮನೆ ಕಟ್ಟುವುದನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಇವರು ನಮ್ಮನ್ನು ನಾಳೆ ಹೊರಗೆ ಹಾಕುತ್ತಾರೆಂಬ ಭಯ ಅಲ್ಲಿನ ಜನರಿಗೆ ಬಂದಿದೆ. ದಯವಿಟ್ಟು, ನಿಮ್ಮ ಪಾಲಿಸಿ ಏನು ಎನ್ನುವುದನ್ನು ನಮಗೆ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ನಾನು ಉತ್ತರ ಒದಗಿಸಿದ್ದೇನೆ. ಪಾಲಿಸಿ ಬಗ್ಗೆ ಅವರು ಕೇಳಿದ್ದಾರೆ, ಅದರ ಬಗ್ಗೆ ನಾನು ಅವರನ್ನು ಕೇಳಿ, ನಂತರ ಉತ್ತರವನ್ನು ಹೇಳುತ್ತೇನೆ. ಆದರೆ, ಈಗ ಅವರು ಕೇಳಿರತಕ್ಕ ಪ್ರಶ್ನೆಗೆ ನಾಣು ಬಹಳ ಸರಿಯಾಗಿ ಉತ್ತರವನ್ನು ಕೊಟ್ಟಿದ್ದೇನೆ. ಒಟ್ಟಿನಲ್ಲಿ ಯಾರಿಗೂ ಕೂಡ ಆ ಅರಣ್ಯದಿಂದ ಹೊರಗೆ ಓಡಿಸುತ್ತಾ ಇಲ್ಲ. ಯಾರು ಸ್ವ ಇಚ್ಛೆಯಿಂದ ಜಮೀನು ಕೊಡುತ್ತಾರೋ, ಅಂತಹವರ ಜಮೀನು ತೆಗೆದುಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ಅದಕ್ಕೂ ಕೂಡ ಬಹಳ ದೊಡ್ಡ ಅಮೌಂಟ್ ನಮ್ಮ ಹತ್ತಿರ ಇಲ್ಲ. ಅದರಲ್ಲಿ ಕೇವಲ 39 ಲಕ್ಷ ರೂ ಹಣ ಮಾತ್ರ ಇದೆ. ಅದರಲ್ಲಿ ಯಾರು ಯಾರಿಗೆ ಕೊಡುತ್ತಾರೋ, ಅದು ಕೊಟ್ಟ ನಂತರ ವಿಚಾರ ಮಾಡೋಣ. ಆದರೆ, ಕಟ್ಟುನಿಟ್ಟಾಗಿ ಮಾಡಬೇಕು ಎಂಬುದಿಲ್ಲ ಒತ್ತಾಯ ಮಾಡಿ ಅವರನ್ನು ಹೊರಗೆ ಹಾಕುತ್ತಿಲ್ಲ. ಯಾರಾದರೂ ಸಂತೋಷದಿಂದ ಕೊಟ್ಟರೆ ಮಾತ್ರ ತೆಗೆದುಕೊಳ್ಳುತ್ತಿದ್ದೇವೆ. ಅಂತಹವರಿಗೆ ಹೊರಗಡೆ ಪುನರ್ ವ್ಯವಸ್ಥೆ ಮಾಡುವುದಕ್ಕೆ ನಾವು ವ್ಯವಸ್ಥೆ ಮಾಡುತ್ತಾ ಇದ್ದೇವೆ. ಇನ್ನು ಪಾಲಿಸಿ ಬಗ್ಗೆ ನಾವು ಯೋಚನೆ ಮಾಡಿ, ವಿಚಾರ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ದಯಮಾಡಿ, ತಾವು ತಪ್ಪು ತಿಳಿದುಕೊಂಡಿದ್ದೀರಿ. ನೀವು ಅಧಿಕಾರಿಗಳ ಜೊತೆಯಲ್ಲಿ ನಮಾಲೋಚನೆ ಮಾಡಿ. ಇಲ್ಲಿ ಗಂಭೀರವಾದಂಥ ಪರಿಸ್ಥಿತಿ ಏನಿದೆ ಎಂದರೆ, ಈ ಬೈ ಬ್ಯಾಕ್ ಪಾಲಿಸಿಯಿಂದ ನಕ್ಸಲೈಟ್ ಚಟುವಟಿಕೆಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಅದರ ಪರಿಣಾಮ, ಆ ನಕ್ಸಲೈಟ್ಸ್‌ಗೆ ಅಲ್ಲಿ ಚಟುವಟಿಕೆ ಮಾಡುವುದಕ್ಕೆ, ನಾವು ನಿಮ್ಮನ್ನು ಉಳಿಸುತ್ತೇವೆಂದು ಹೇಳಿ ಗೊಂದಲ ಮಾಡುವುದಕ್ಕೆ ಅವಕಾಶವಾಗುತ್ತದೆ. ಈಗಾಗಲೇ ಮನೆ ಮನಗೆ ಹೊಗಿ ನಾವು ನಿಮ್ಮ ಜೊತೆಯಲ್ಲಿದ್ದೇವೆ ಎಂದು ಹೇಳಿ, ಕೊನೆಗೆ ಸರ್ಕಾರ ಅವರಿಗೂ ತಲೆಬಗ್ಗಿಸುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಕಾಡು ಉಳಿದಿರುವುದೇ ರೈತರಿಂದ, ಕಾಡು ಉಳಿದಿರುವುದೇ ಅಲ್ಲಿ ವಾಸ ಮಾಡುವಂಥ ಜನರಿಂದ. ಅವರು ಯಾರೂ ಕಾಡಿಗೆ ಕೈ ಹಾಕಿಲ್ಲ, ಬೇಕಾದರೆ ತಾವು ಬಂದು ತನಿಖೆ ಮಾಡಿ. ನಾನೂ ಕೂಡ ನಿಮ್ಮ ಜೊತೆ ಬರುತ್ತೇನೆ. ಅವರಿಗೆ

ಈಗಾಗಲೇ ಮುಂದೇನು ಎಂದು ಯೋಚನೆ ಮಾಡತಕ್ಕ ಪರಿಸ್ಥಿತಿ ಬಂದಿದೆ. ದಯಮಾಡಿ, ಇದನ್ನು ಕೈಬಿಡಿ, ಅವರಿಗೆ ರಕ್ಷಣೆ ಕೊಡಿ, ಅರಣ್ಯ ಉಳಿಸಿ. ಅಲ್ಲಿರತಕ್ಕ ಜನ ನಿಮಗೆ ಯಾವರೀತಿಯ ಸಹಕಾರ ಬೇಕೋ ಅದನ್ನು ಕೊಡುತ್ತಾರೆ. ಇದನ್ನು ಒನ್ಸ್ ಫಾರ್ ಆಲ್ ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ನಕ್ಸಲೈಟ್ಸ್ ಚಟುವಟಿಕೆಗಳಿಗೆ ನೀವೇ ಕುಮ್ಮಕ್ಕು ಕೊಟ್ಟಹಾಗೆ ಆಗುತ್ತದೆ. ಇಷ್ಟೇ ನನ್ನ ವಿನಂತಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಯಾರಿಗೂ ಒತ್ತಾಯ ಮಾಡಿ ಜಮೀನು ತೆಗೆದುಕೊಳ್ಳುವುದಕ್ಕೆ ನಾವು ತಯಾರಿಲ್ಲ. ಅವರೇ ಸ್ವ ಇಚ್ಛೆಯಿಂದ ಮಾರುತ್ತೇವೆಂದರೆ ಮಾತ್ರ ತೆಗೆದುಕೊಳ್ಳುತ್ತೇವೆ. ನಾವು ಮಾತ್ರ ಒತ್ತಾಯ ಮಾಡಿ ತೆಗೆದುಕೊಳ್ಳುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅಂತಹ ಪರಿಸ್ಥಿತಿ ಇಲ್ಲ. ಯಾರೋ ಒಂದಿಬ್ಬರು ವಾಲಂಟರಿಯಾಗಿ ಬಂದಿದ್ದಾರೆ, ಅದಿನ್ನೂ ಇತ್ಯರ್ಥ ಆಗಿಲ್ಲ. ನಾವು ಸಬ್ ರಿಜಿಸ್ಟ್ರಾರ್‌ರವರಿಗೆ ಬೆಲೆ ಕೇಳುವುದಕ್ಕೆ ಕಳುಹಿಸಿದ್ದೇವೆ. ನಮಗೆ ಇನ್ನೂ ಬೆಲೆ ವಿಚಾರ ಬಂದಿಲ್ಲ. ಬಂದಾಗ, ನಾವು ಅವರದನ್ನು ತೀರ್ಮಾನ ಮಾಡುತ್ತೇವೆ. ಮತ್ತೆ ನಮ್ಮ ಹತ್ತಿರ ದುಡ್ಡು ಇರುವುದೇ 39 ಲಕ್ಷ ರೂ. ಎಲ್ಲಾ ಪ್ರದೇಶದಲ್ಲೂ ಮಾಡುವುದಕ್ಕೆ ಸಾಧ್ಯವಿಲ್ಲ. ಅದರ ಜೊತೆಗೆ, ಅದಿನ್ನೂ ಪರಿಶೀಲನೆಯಲ್ಲಿದೆ. ಪರಿಶೀಲನೆಯಾದ ನಂತರ, ಏನು ನಿಯಮಗಳನ್ನು ಮಾಡಬೇಕು, ಯಾವರೀತಿಯಲ್ಲಿ ಮಾಡಬೇಕು ಎಂಬುದನ್ನು ಮಾಡುತ್ತೇವೆ. ನಾವು ಉದ್ದೇಶಪೂರ್ವಕವಾಗಿ ಏನೂ ಮಾಡುವುದಿಲ್ಲ. ಯಾರಿಗೂ ಹೊರಗೆ ಹಾಕುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ಶಿವಮೊಗ್ಗ ಜಿಲ್ಲೆಗೆ ಬನ್ನಿ, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದುಕೊಂಡು ಬನ್ನಿ, ಸಮಾಲೋಚನೆ ಮಾಡೋಣ, ಅವರಿಗೆ ಧೈರ್ಯ ತುಂಬಿ, ತೊಂದರೆ ಮಾಡುವುದಿಲ್ಲವೆಂಬ ಸೂಚನೆಯನ್ನಾದರೂ ನೀವು ಕೊಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ನಿಮ್ಮ ಜೊತೆಗೇ ಬರುತ್ತೇನೆ. ಅಲ್ಲಿ ಚರ್ಚೆ ಮಾಡೋಣ. ಎಲ್ಲರ ಜೊತೆ ಕುಳಿತು ಮಾತನಾಡೋಣ. ಏನಾದರೂ ಸಮಸ್ಯೆ ಇದ್ದರೆ ಬಗೆಹರಿಸೋಣ. ಯಾರಿಗೂ ಅನ್ಯಾಯ ಮಾಡತಕ್ಕ ಉದ್ದೇಶ ನಮಗಿಲ್ಲ. ನಾನು ನಿಮಗೆ ಕರೆಯುತ್ತೇನೆ.

ಅಧ್ಯಕ್ಷರು:– ನಾನು ಮುಂದಿನ ಪ್ರಶ್ನೆಗೆ ಹೊಗುತ್ತೇನೆ. ಮಾನ್ಯ ಜ್ಞಾನೇಂದ್ರರವರೇ, ನಿಮ್ಮ ನಾಯಕರು ಸ್ಪಷ್ಟವಾದ ಪ್ರಶ್ನೆ ಕೇಳಿದ್ದಾರೆ. ಮಾನ್ಯ ಮಂತ್ರಿಗಳು, ಶಿವಮೊಗ್ಗ ಜಿಲ್ಲೆಗೆ ಬರುವುದಕ್ಕೆ, ನಿಮ್ಮ ಜೊತೆಯಲ್ಲಿ ಚರ್ಚೆ ಮಾಡುವುದಕ್ಕೆ, ರೈತರು ಜೊತೆ ಚರ್ಚೆ ಮಾಡುವುದಕ್ಕೆ ಸಿದ್ದರಿದ್ದಾರೆ. ಮತ್ತೆ ಏಕೆ ಪ್ರಶ್ನೆ ಕೇಳುತ್ತೀರಿ? ಮುಂದಿನ ಪ್ರಶ್ನೆಗೆ ಹೋಗೋಣ. ದಯಮಾಡಿ ಕುಳಿತುಕೊಳ್ಳಿ, ಆ ತರಹ ಕೊಡುವುದಕ್ಕೆ ಆಗುವುದಿಲ್ಲ ಸಮಗ್ರವಾಗಿ ಚಿಂತನೆ ಮಾಡೋಣ ನಾನು ಬರುತ್ತೇನೆಂದು ಮಾನ್ಯಮಂತ್ರಿಗಳು ಹೇಳಿದ್ದಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಜ್ಞಾನೇಂದ್ರರವರೆ, ನಿಮ್ಮ ನಾಯಕರು ಕೊಟ್ಟ ಸಲಹೆಗೆ ಅವರು ಒಪ್ಪಿಕೊಂಡಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾವು ಖರೀದಿ ಮಾಡುವುದಿಲ್ಲ, ಬೈ ಬ್ಯಾಕ್ ಯೋಜನೆಯನ್ನು ಕೈಬಿಡುತ್ತೇವೆಂದು ಹೇಳಲಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ನಾವು ಯಾರಿಗೂ ಒತ್ತಾಯದಿಂದ ಖರೀದಿ ಮಾಡುತ್ತಾ ಇಲ್ಲವೆಂದು ಹೇಳುತ್ತಿದ್ದೇನಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾವು ದಟ್ಟವಾಗಿ ಅರಣ್ಯ ಬೆಳೆಸೋಣ, ನಿಮಗೆ ಏನು ಸಹಕಾರ ಬೇಕೋ ಅದನ್ನು ನಾವು ಕೊಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಅದೇ ಉದ್ದೇಶ ನಮ್ಮದೂ ಇದೆ. ಮಧ್ಯದಲ್ಲಿ ಅವರು ಎಲ್ಲಿಗೂ ಹೋಗುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು:– ಮಾನ್ಯ ಮಂತ್ರಿಗಳು ಮುಕ್ತ ಮನಸ್ಸಿನಿಂದ ಇದ್ದಾರೆ. ನಿಮ್ಮ ಜೊತೆ ಬಂದು ಚರ್ಚೆ ಮಾಡೋಣವೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಅಲ್ಲಿ ಬೈ ಬ್ಯಾಕ್ ಸರಿ ಇಲ್ಲವೆಂದು ತಾವು ಹೇಳಿದ್ದೀರಿ. ಅವರೂ ಮುಕ್ತ ಮನಸ್ಸಿನಿಂದ ಇದ್ದಾರೆ.

ಶ್ರೀ ಅರಗ ಜ್ಞಾನೇಂದ್ರ:– 39 ಲಕ್ಷ ರೂ ಇಟ್ಟುಕೊಂಡು, ಆ ಜನರ ಜೀವನಕ್ಕೆ ಬೆಂಕಿ ಹಚ್ಚಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಅವರಿಗೆ ಯಾರು ಈ ವಿಚಾರ ಹೇಳಿದ್ದಾರೋ ಅದು ತಪ್ಪು. ನಾನು ಸ್ಪಷ್ಟವಾಗಿ ಹೇಳುತ್ತಾ ಇದ್ದೇನೆ.

ತುರುವೇಕೆರೆ ತಾಲ್ಲೂಕು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಕಟ್ಟಡ ನಿರ್ಮಾಣ

12(662) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುರುವೇಕೆರೆ ತಾ. ಸರ್ಕಾರಿ ಕೈಗಾರಿಕಾ ಶಿಕ್ಷಣ ಸ್ವಂತ ಕಟ್ಟಡ ನಿರ್ಮಾಣಕ್ಕೆ ಪ್ರಸ್ತಾವನೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು;

ಇ) ಪ್ರಸಕ್ತ ಸಾಲಿನಲ್ಲಿ ನಿರ್ಮಾಣ ಮಾಡಲಾಗುವುದೇ?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) :

ಅ) ಇಲ್ಲ

ಆ) ಅನ್ವಯಿಸುವುದಿಲ್ಲ.

ಇ) ಜಮೀನು ಲಭ್ಯತೆ ಖಾತ್ರಿಯಾದ ನಂತರವೇ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪರಿಗಣಿಸಲಾಗುವುದು.

ಶ್ರೀ ಎಂ.ಟಿ. ಕೃಷ್ಣಪ್ಪ :– ಮಾನ್ಯ ಅಧ್ಯಕ್ಷರೇ ತುರುವೇಕೆರೆ ತಾಲ್ಲೂಕಿನಲ್ಲಿ ಜಮೀನು ಲಭ್ಯವಾದ ನಂತರ ಕಟ್ಟಡವನ್ನು ನಿರ್ಮಾಣ ಮಾಡುತ್ತೇವೆಂದು ಸನ್ಮಾನ್ಯ ಸಚಿವರು ಹೇಳಿದ್ದಾರೆ. ಇವತ್ತಿನದಿವಸ, ಇದರ ಹಿನ್ನೆಲೆಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 12 ಸಾವಿರ ಜನ ಇರತಕ್ಕಂಥ ಒಂದು ಸಣ್ಣ ಪಟ್ಟಣದಲ್ಲಿ ಚದರಡಿಗೆ 7 ರೂಪಾಯಿ 33 ಪೈಸೆ ಕೊಡುತ್ತಾ ಇದ್ದಾರೆ. ಆದರೆ, ಬೆಂಗಳೂರಿನಲ್ಲಿ ಬೆಲೆ ಇಲ್ಲ. ತುಮಕೂರಿನಲ್ಲೂ ಇಲ್ಲ. 7–33 ಪೈಸೆಯನ್ನು ಕೊಟ್ಟು ಬಾಡಿಗೆ ತೆಗೆದುಕೊಂಡಿರುವುದು ನಿಜವಾಗಿಯೂ ಇದರ ಹಿನ್ನೆಲೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು.